**ಗಂಗಾರಾಮ್ ಬಡೇರಿಯಾ,** ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿ (ಪಂ.ರಾ)
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಹಂತ, 3ನೇ ಮಹಡಿ
ಬಹುಮಹಡಿಗಳ ಕಟ್ಟಡ, ಬೆಂಗಳೂರು-1
ದೂ : 080-22384574/22032941
ಫ್ಯಾಕ್ಸ್ : 080-22389520
ಇ-ಮೇಲ್ : secyrdpr@gmail.com
secy-rdpr@Karnataka.gov.in

ಅ.ಸ. ಪತ್ರ ಸಂ.ಗ್ರಾಅಪ 72 ಜಿಪಸ 2013 ದಿನಾಂಕ :04-04-2014

**ಮಾನ್ಯರೆ,**

**ವಿಷಯ:** ವಿವಿಧ ಯೋಜನೆಗಳಡಿ ನಿರ್ವಹಿಸುವ ಕಾಮಗಾರಿಗಳ ಪ್ರಗತಿ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು.

**ಉಲ್ಲೇಖ:** ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅ.ಟಿ. ಸಂಖ್ಯೆ ಗ್ರಾಅಪ 21 ಯೋಉಮಾ 2014, ದಿನಾಂಕ: 14.03.2013.

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಅನಧಿಕೃತ ಟಿಪ್ಪಣಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಾಗೂ ಜಿಲ್ಲಾ ವಲಯ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ಉಪಯೋಗಿಸಿದ ಅನುದಾನದ ಬಗ್ಗೆ ಮಾಹಿತಿ ಸಲ್ಲಿಸುವಂತೆ ತಿಳಿಸಿರುತ್ತದೆ. ಈ ಪ್ರಯುಕ್ತವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾದ 13ನೇ ಹಣಕಾಸು ಆಯೋಗದ ಅನುದಾನ, ಬಿ.ಆರ್.ಜಿ.ಎಫ್ ಹಾಗೂ ಆರ್.ಜಿ.ಪಿ.ಎಸ್.ಎ ಮತ್ತು ರಾಜ್ಯ ಸರ್ಕಾರದ ಯೋಜನೆಗಳಾದ ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನ ಹಾಗೂ ತಾಲ್ಲೂಕು ಪಂಚಾಯತಿ ಅಭಿವೃದ್ಧಿ ಅನುದಾನ ಇವುಗಳೆಲ್ಲಾ ಕುರಿತಾದಂತೆ ಸರ್ಕಾದಿಂದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು. ಸದರಿ ಯೋಜನೆಗಳ ಸಮರ್ಪಕ ನಿರ್ವಹಣೆಯ ಬಗ್ಗೆ ಜಿಲ್ಲಾ ಪಂಚಾಯತಿಯಿಂದ ಯಾವುದೇ ಮೇಲ್ವಿಚಾರಣೆ ಮಾಡಿರುವುದು ತಿಳಿದಬಂದಿಲ್ಲ ಅದೇ ರೀತಿ ಯಾವುದೇ ಜಿಲ್ಲಾ ಪಂಚಾಯತಿಗಳಿಂದ ಸರ್ಕಾರಕ್ಕೆ ಪ್ರಗತಿ ವರದಿಗಳು ಸಹ ಸ್ವೀಕೃತಿಯಾಗುತ್ತಿಲ್ಲ.

ಇದನ್ನು ಸರ್ಕಾರವು ಬಹು ಗಂಭೀರವಾಗಿ ಪರಿಗಣಿಸಿದೆ. ಆದುದರಿಂದ ಈಗಲಾದರೂ ಈ ವಿಷಯದ ಕಡೆ ಗಮನಹರಿಸಿ ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ 2013-14ನೇ ಸಾಲಿನ ಪ್ರಗತಿ ವರದಿಯನ್ನು ಸರ್ಕಾರಕ್ಕೆ ತಪ್ಪದೆ ಕಳುಹಿಸಿಕೊಡಬೇಕೆಂದು ಸೂಚಿಸಿದೆ. ಅದೇ ರೀತಿ ಇನ್ನು ಮುಂದೆಯೂ ಸಹ ಸದರಿ ನಮೂನೆಯಲ್ಲಿ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಪ್ರಗತಿ ವರದಿಗಳನ್ನು ಸರ್ಕಾರಕ್ಕೆ ತಪ್ಪದೆ ಸಲ್ಲಿಸಲು ತಿಳಿಸಿದೆ. ರಾಜ್ಯ ಮಟ್ಟದಲ್ಲಿ ನಡೆಯುವ ವಿವಿಧ ವಿಧಾನ ಮಂಡಲಗಳ ಸಭೆಗಳಲ್ಲಿ ವಿಶೇಷವಾಗಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕೆ ಉಪಯೋಗಿಸಿದ ಅನುದಾನದ ಬಗ್ಗೆ ಚರ್ಚಿಸಬೇಕಾಗಿರುವುದರಿಂದ ಕೇಳಿರುವ ಮಾಹಿತಿಯನ್ನು ತಪ್ಪದೆ ಸಲ್ಲಿಸಲು ತಿಳಿಸಿದೆ. ಸದರಿ ಪ್ರಗತಿ ವರದಿಯನ್ನು sozp.11@gmail.com ಮತ್ತು pr.kar@nic.in ಎಂಬ ಮೇಲ್‌ಗಳಿಗೆ ಕಳುಹಿಸಿಕೊಡಬೇಕೆಂದು ಸೂಚಿಸಿದೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.

ಅನುಬಂಧ-1

## 2013-14 ನೇ ಸಾಲಿನ ಆರ್ಥಿಕ ಪ್ರಗತಿ ವರದಿ

ಯೋಜನೆ ಹೆಸರು: ಜಿಲ್ಲೆಯ ಹೆಸರು:

| ಕ್ರ.ಸಂ | ತಾಲ್ಲೂಕು ಹೆಸರು | ಅನುದಾನದ ಹಂಚಿಕೆ | ಆರಂಭಿಕ ಶಿಲ್ಕು | ಬಿಡುಗಡೆ ಯಾದ ಅನುದಾನ | ವೆಚ್ಚ | ಪ.ಜಾ.ರವರ ಕಲ್ಯಾಣಕ್ಕಾಗಿ ಮಾಡಿದ ವೆಚ್ಚ | ಪ.ಪಂ.ರವರ ಕಲ್ಯಾಣಕ್ಕಾಗಿ ಮಾಡಿದ ವೆಚ್ಚ | ವಿಕಲಚೇತನಕ್ಕಾಗಿ ಮಾಡಿದ ವೆಚ್ಚ |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |

**ಸೂಚನೆ:** ಇದೆ ರೀತಿ 2014-15ನೇ ಸಾಲಿನಿಂದ ಪ್ರತಿ ಮಾಹೆ 5ನೇ ತಾರೀಖು ಒಳಗೆ ಪ್ರಗತಿ ವರದಿಗಳನ್ನು ತಪ್ಪದೆ ಸರ್ಕಾರಕ್ಕೆ ಸಲ್ಲಿಸಲು ತಿಳಿಸಿದೆ.

ಅನುಬಂಧ-2

## 2013-14 ನೇ ಸಾಲಿನ ಭೌತಿಕ ಪ್ರಗತಿ ವರದಿ

ಯೋಜನೆ ಹೆಸರು: ಜಿಲ್ಲೆಯ ಹೆಸರು:

| ಕ್ರ.ಸಂ | ತಾಲ್ಲೂಕು ಹೆಸರು | ತಗೆದುಕೊಂಡ ಕಾಮಗಾರಿಗಳ ಸಂಖ್ಯೆ | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ | ಮುಂದುವರೆದ ಕಾಮಗಾರಿಗಳ ಸಂಖ್ಯೆ | ಕೈ ಬಿಡಲಾಗಿದ್ದ ಕಾಮಗಾರಿಗಳ ಸಂಖ್ಯೆ |
|---|---|---|---|---|---|
| | | | | | |
| | | | | | |
| | | | | | |

**ಸೂಚನೆ:** ಇದೆ ರೀತಿ 2014-15ನೇ ಸಾಲಿನಿಂದ ಪ್ರತಿ ಮಾಹೆ 5ನೇ ತಾರೀಖು ಒಳಗೆ ಪ್ರಗತಿ ವರದಿಗಳನ್ನು ತಪ್ಪದೆ ಸರ್ಕಾರಕ್ಕೆ ಸಲ್ಲಿಸಲು ತಿಳಿಸಿದೆ.